**ಸಾಕ್ಷಿಯನ್ನು ದಿಃ 15.11.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ T.G.T.ವಕೀಲರಿಂದ.**

ಪಾರಿಕತ್ತನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ತಂದೆಗೆ ಪಾರಿಕತ್ತನ ಮೂಲಕ ಆಸ್ತಿಗಳು ಬಂದಿರುವ ಬಗ್ಗೆ ತೋರಿಸಲು ಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಮ್ಮನಿಗೆ ಇಬ್ಬರೂ ಮಕ್ಕಳು ಇದ್ದಾರೆ. ಅವರ ಹೆಸರುಗಳೆಂದರೆ ಲೋಕೇಶ್ ಮತ್ತು ಕೃಷ್ಣ ಆಗಿರುತ್ತದೆ. ದಾವಾ ಐ ಟಂ 5 ಸರ್ವೆ ನಂ 50 ರಲ್ಲಿ 2 ಎಕರೆ 3 ಗುಂಟೆ ಜಮೀನು ನಾರಾಯಣ ಅವರಿಂದ ಅವರ ಮಕ್ಕಳಾದ ಲೋಕೆಶ್ ಮತ್ತು ಕೃಷ್ಣ ಅವರಿಗೆ ಅಸಲು ದಾವೆ ಸಂ 235/2022 ರಲ್ಲಿ ಆದ ಆದೇಶದಂತೆ ಖಾತೆ ಬದಲಾವಣೆ ಎಂ.ಆರ್. ಹೆಚ್ 4/2024-25 ರಂತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ಗ್ರಾಮ ಠಾಣಾದಲ್ಲಿರುವ ಸ್ವತ್ತಿನ ಖಾತಾ ನಂ ನನಗೆ ಹೇಳಲು ಬರುವುದಿಲ್ಲ. ಈ ದಾವೆ ದಾಖಲು ಮಾಡುವ ಮೊದಲು ಮತ್ತು ಪಾಟೀ ಸವಾಲು ಆದ ನಂತರ ನಾನು ಗ್ರಾಮ ಠಾಣಾದಲ್ಲಿರುವ ಸ್ವತ್ತಿನ ಖಾತಾ ನಂ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ದಿನಾಂಕ 05.02.1995 ರಲ್ಲಿ ಆಗಿರುವ ಪಾರಿಕತ್ತಿನಂತೆ ಈಗಾಗಲೇ ಭಾಗ ಆಗಿದ್ದು ಸರ್ವೆ ನಂ 16/1, 16/6, 16/11, 11/1, ಸ್ವತ್ತುಗಳು ಪ್ರತಿವಾದಿ 3 ಮತ್ತು 8 ಅವರ ಕುಟುಂಬದವರಿಗೆ ಬಂದಿರುತ್ತೆವೆ ಎಂದರೆ ಸಾಕ್ಷಿ ಪಾರಿಕತ್ತನ್ನು ಸೃಷ್ಟಿ ಮಾಡಿರುತ್ತಾರೆಂದು ಹೇಳುತ್ತಾರೆ.

ಪಾರಿಕತ್ತನಲ್ಲಿ ನನ್ನ ಭಾಗಕ್ಕೆ ಬಂದ ಆಸ್ತಿಗಳನ್ನು ಈಗಾಗಲೇ ಮಾರಾಟ ಮಾಡಿದ್ದು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಇದ್ದಾಗಲೇ ನನ್ನ ತಂದೆ ನನ್ನ ಸಹಿ ಪಡೆದು ಮಾರಾಟ ಮಾಡಿರುತ್ತಾರೆಂದು ಹೇಳುತ್ತಾರೆ. ಪಾರಿಕತ್ತನಲ್ಲಿ ಇರುವ ಎಲ್ಲಾ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಪಾರಿಕತ್ತನಲ್ಲಿ ಇರುವ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. ಸರ್ವೆ ನಂ 30/4 ರಲ್ಲಿ ಇರುವ 23 ಗುಂಟೆ ಜಮೀನು ನನ್ನ ಹೆಂಡತಿ ಮತ್ತು ನಾರಾಯಣ ಅವರ ಹೆಸರಿಗೆ

ಇದ್ದು ನನಗೆ ಹೆಂಡತಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಿವ್ಯಾ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಿವ್ಯಾ ಅವರಿಗೆ ಆಗಿರುವ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸಿದ ವಿಚಾರವನ್ನು ಈ ದಾವೆ ಸಲ್ಲಿಸುವ ಸಮಯದಲ್ಲಿ ವಕೀಲರಿಗೆ ತಿಳಿಸಿರುವುದಿಲ್ಲ. ದಿವ್ಯಾ ಅವರಿಗೆ ಮಾರಾಟ ಆಗಿರುವ ಬಗ್ಗೆ ನನಗೆ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಮೊದಲೆ ಗೊತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 8 ಅವರ ಕುಟುಂಬದವರಿಗೆ ಮೋಸ ಮಾಡುವ ಉದ್ದೇಶದಿಂದ ಮತ್ತು ಅವರ ಆಸ್ತಿಯನ್ನು ಖಬಳಿಸುವ ಉದ್ದೇಶದಿಂದ ನನ್ನ ತಮ್ಮ ನಾರಾಯಣ ಅವರೊಂದಿಗೆ ಸೇರಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.